# BGS NANDI RUN - 2025











SJC INSTITUTE OF TECHNOLOGY
BGS Nandi Run - 2025


S J C Institute of Technology
CHICKBALLAPUR




SJC INSTITUTE OF TECHNOLOGY
(An Autonomous Institution under VTU from 2024-25)
THIRD PLACE


SJC INSTITUTE OF TECHNOLOGY
(An Autonomous Institution under VTU from 2024-25)
Estd. 1986
THIRD PLACE
FIRST PLACE
SECOND PLACE


SJC INSTITUTE OF TECHNOLOGY
(An Autonomous Institution under VTU from 2024-25)


|| Jai Sri Gurudev ||
Sri Adichunchanagiri Shikshana Trust (R.)
SJC INSTITUTE OF TECHNOLOGY
(An Autonomous Institution under VTU from 2024-25)
AICTE Approved, Accredited by NBA (CSE, ISE, ECE, ME, CV, AE) & NAAC with A+ Grade, QS I-Gauge Gold rated
Chikkaballapura - 562 101, Karnataka
www.sjcit.ac.in
Estd. 1986


|| Jai Sri Gurudev ||
Sri Adichunchanagiri Shikshana Trust (R.)
SJC INSTITUTE OF TECHNOLOGY
(An Autonomous Institution under VTU from 2024-25)
AICTE Approved, Accredited by NBA (CSE, ISE, ECE, ME, CV, AE) & NAAC with A+ Grade, QS I-Gauge Gold rated
Chikkaballapura - 562 101, Karnataka
www.sjcit.ac.in
Estd. 1986
Department of Physical Education & Sports
3rd
BGS Nandi Run-2025
Run Today, Sustain Tomorrow
3ನೇ
ಬಿಜಿಎಸ್ ನಂದಿ ಓಟ-2025
Date: 12 July 2025 | Timings: 6.00 AM




ಚಿಕ್ಕಬಳ್ಳಾಪುರದ ಎಸ್‌ಜೆಸಿಐಟಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಬಿಜಿಎಸ್ ನಂದಿ ಓಟದ ಸ್ಪರ್ಧೆಗೆ ಎಸ್‌ಪಿ ಕುಶಾಲ್ ಚೌಕ್ಸೆ ಚಾಲನೆ ನೀಡಿದರು

# ಬಿಜಿಎಸ್ ನಂದಿ ಓಟದ ಸ್ಪರ್ಧೆ

ಪ್ರಜಾವಾಣಿ ವಾರ್ತೆ

**ಚಿಕ್ಕಬಳ್ಳಾಪುರ:** ಎಸ್‌ಜೆಸಿಐಟಿ ಕಾಲೇಜಿನಲ್ಲಿ 'ನಾಳೆಯ ಉಳಿವಿಗೆ ಇಂದು ಓಡಿ' ಎಂಬ ಘೋಷ ವಾಕ್ಯದೊಂದಿಗೆ ಆಯೋಜಿಸಲಾಗಿದ್ದ 3ನೇ ವರ್ಷದ ಬಿಜಿಎಸ್ ನಂದಿ ಓಟದ ಸ್ಪರ್ಧೆಗೆ ಎಸ್.ಪಿ ಕುಶಾಲ್ ಚೌಕ್ಸೆ ಶನಿವಾರ ಚಾಲನೆ ನೀಡಿದರು.

ಡಾ.ನಿರ್ಮಲಾನಂದನಾಥ ಸ್ವಾಮೀಜಿ ದೀಕ್ಷೆ ಪಡೆದ ದಿನದ ಹಿನ್ನೆಲೆಯಲ್ಲಿ ಬಿಜಿಎಸ್ ನಂದಿ ಓಟ ಎಂಬ 10 ಕಿ.ಮೀ ಹಾಗೂ 5 ಕಿ.ಮೀ ಸ್ಪರ್ಧೆ ಆಯೋಜಿಸುತ್ತಿದೆ. 500ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. ಪುರುಷರಿಗೆ 10 ಕಿ.ಮೀ ಹಾಗೂ ಮಹಿಳೆಯರಿಗೆ 5 ಕಿ.ಮೀ. ಓಟವನ್ನು ಪ್ರತ್ಯೇಕವಾಗಿ ಆಯೋಜಿಸಲಾಗಿತ್ತು.

ಎಸ್.ಜೆ.ಸಿ ಕಾಲೇಜಿನ ಆವರಣದ ಬಿಜಿಎಸ್ ಮೈದಾನದಿಂದ ಪ್ರಾರಂಭವಾದ ಓಟ ಬಿ.ಬಿ ರಸ್ತೆಯ ಮೂಲಕ ಜಡಲತಿಮ್ಮನಹಳ್ಳಿ ಹಾಗೂ ನಂದಿಗ್ರಾಮದಿಂದ ಪುನಃ ಕಾಲೇಜಿಗೆ ಆಗಮಿಸಬೇಕಿತ್ತು. ಮೊದಲು ಬಹುಮಾನ ₹50 ಸಾವಿರ, 2ನೇ ಹಾಗೂ 3ನೇ ಬಹುಮಾನವು ಇರುತ್ತದೆ ಎಂದು ಕಾಲೇಜಿನ ಪ್ರಾಂಶುಪಾಲ ಜಿ.ಟಿ.ರಾಜು ತಿಳಿಸಿದರು.

# ಓಟದಿಂದ ಮಾನಸಿಕ, ದೈಹಿಕವಾಗಿ ಸದೃಢ

## ಬಿಜಿಎಸ್ ನಂದಿ ಓಟ–2025ಕ್ಕೆ ಚಾಲನೆ ನೀಡಿ ಮಾತನಾಡಿದ ಎಸ್‌ಪಿ ಕುಶಲ್ ಚೌಕ್ಸೆ

**ವಿಕ ಸುದ್ದಿಲೋಕ** ಚಿಕ್ಕಬಳ್ಳಾಪುರ

ಪ್ರತಿಯೊಬ್ಬರೂ ಪ್ರತಿನಿತ್ಯ ವ್ಯಾಯಾಮ, ಓಟ, ದೈಹಿಕವಾಗಿ ದಂಡಿಸುವ ಚಟುವಟಿಕೆಗಳಲ್ಲಿ ಭಾಗಿಯಾಗಬೇಕು. ಇದರಿಂದ ಮಾನಸಿಕ ಮತ್ತು ದೈಹಿಕವಾಗಿ ಸದೃಢವಾಗಿರಲು ಸಾಧ್ಯ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ ತಿಳಿಸಿದರು.

ನಗರ ಹೊರವಲಯದ ಎಸ್‌ಜೆಸಿ ತಾಂತ್ರಿಕ ಮಹಾವಿದ್ಯಾಲಯದ ಬಿಜಿಎಸ್ ಗ್ರೌಂಡ್‌ನಿಂದ ''ನಾಳೆಯ ಉಳಿವಿಗೆ, ಇಂದು ಓಡಿ'' ಘೋಷ ವಾಕ್ಯದೊಂದಿಗೆ ಏರ್ಪಡಿಸಿದ್ದ 10 ಕಿ.ಮೀ. ಮತ್ತು 5 ಕಿ.ಮೀ. ಬಿಜಿಎಸ್ ನಂದಿ ಓಟ–2025ಕ್ಕೆ ಚಾಲನೆ ನೀಡಿ ಸ್ವತಃ ತಾವು ಓಡಿದ ಅವರು, ನಂತರ ಸುದ್ದಿಗಾರರ ಜತೆ ಮಾತನಾಡಿದರು.

ಮನುಷ್ಯರು ಕ್ರಿಯಾಶೀಲವಾಗಿರಬೇಕಾದರೆ ದಿನನಿತ್ಯ ವ್ಯಾಯಾಮ, ಓಟ, ಕ್ರೀಡೆಗಳಲ್ಲಿ ಭಾಗವಹಿಸಬೇಕು. ಆಗ ಒತ್ತಡ ರಹಿತವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಎಸ್‌ಜೆಸಿಐಟಿ ವತಿಯಿಂದ ನಂದಿ ಓಟ ನಡೆಸುತ್ತಿರುವುದು ಸ್ವಾಗತಾರ್ಹ. ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚೆಚ್ಚು ನಡೆಯಬೇಕು. ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಇದರಿಂದ ಉತ್ತಮ ಸಂದೇಶ ರವಾನೆಯಾಗಲಿದೆ ಎಂದು ತಿಳಿಸಿದರು.

ಎಸ್‌ಜೆಸಿಐಟಿ ಪ್ರಿನ್ಸಿಪಾಲ್ ಡಾ.ಜಿ.ಟಿ.ರಾಜು ಮಾತನಾಡಿ, ಸ್ವಾಮೀಜಿಯವರ ಆಶೀರ್ವಾದದಿಂದ ಎಸ್‌ಜೆಸಿಐಟಿಯಲ್ಲಿ ಕಳೆದ 38 ವರ್ಷಗಳಿಂದ ಸಾವಿರಾರು ಎಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ರೂಪಿಸಿದೆ. 64 ಎಕರೆ ಸುಸಜ್ಜಿತವಾದ ಆವರಣವನ್ನು ನಮ್ಮ ಕಾಲೇಜು ಹೊಂದಿದೆ. ಆರೋಗ್ಯದ ಓಟದಲ್ಲಿ ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗ ಸೇರಿದಂತೆ ಸುಮಾರು 1000ಕ್ಕೂ ಹೆಚ್ಚು ಸ್ಪರ್ಧಿಗಳು ಓಟದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದಾರೆ.




ಚಿಕ್ಕಬಳ್ಳಾಪುರ ಹೊರವಲಯದ ಎಸ್‌ಜೆಸಿಐಟಿಯಲ್ಲಿ ಶನಿವಾರ ಬಿಜಿಎಸ್ ನಂದಿ ಓಟ–2025ಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ ಚಾಲನೆ ನೀಡಿ, ಓಟದಲ್ಲಿ ಪಾಲ್ಗೊಂಡರು.

### 10 ಕಿಮೀ ಓಟದಲ್ಲಿ ಮಂಗಳೂರಿನ ರಂಗಣ್ಣ ನಾಯ್ಕರ್ ಮೊದಲ ಬಹುಮಾನ

ಸ್ಪರ್ಧೆಯಲ್ಲಿ 10 ಕಿ.ಮೀ. ಓಟದಲ್ಲಿ ಮಂಗಳೂರಿನ ರಂಗಣ್ಣ ನಾಯ್ಕರ್ ಮೊದಲ ಬಹುಮಾನ, ಹಾವೇರಿಯ ಗೋವಿಂದರಾಜು ಹಳಗಿ 2ನೇ ಬಹುಮಾನ ಮತ್ತು ಬೆಂಗಳೂರಿನ ಗಣಪತಿ 3ನೇ ಬಹುಮಾನ ಪಡೆದರು. 5 ಕಿ.ಮೀ. ಮಹಿಳಾ ಓಟದಲ್ಲಿ ದೊಡ್ಡಬಳ್ಳಾಪುರದ ಪ್ರಣತಿ ಪ್ರಥಮ ಬಹುಮಾನ, ದೊಡ್ಡಬಳ್ಳಾಪುರದ ಸೀಮಾ ಮಹಂತೇಶ್ 2ನೇ ಬಹುಮಾನ, ಉಡುಪಿಯ ಜಿ.ನಂದಿನಿ 3ನೇ ಬಹುಮಾನ ಪಡೆದರು.

ಕಾರ್ಯಕ್ರಮದಲ್ಲಿ ಎಸ್‌ಜೆಸಿಐಟಿ ಆಡಳಿತಾಧಿಕಾರಿ ಜಿ.ಆರ್.ರಂಗಸ್ವಾಮಿ, ಡೀನ್ ಅಕಾಡೆಮಿಕ್ಸ್ ಡಾ.ಬಿ.ಎಚ್.ಮಂಜುನಾಥ್ ಕುಮಾರ್, ಸ್ಟೂಡೆಂಟ್ ವೆಲ್‌ಫೇರ್ ಡೀನ್ ಡಾ.ಜಿ.ನಾರಾಯಣ್, ಬಿಜಿಎಸ್ ಪಾಲಿಟೆಕ್ನಿಕ್ ಪ್ರಿನ್ಸಿಪಾಲ್ ಡಾ.ವೈ.ಆರ್.ಮಂಜುನಾಥ್, ಬಿಜಿಎಸ್ ಬಿ.ಪಿಎಡ್ ಪ್ರಿನ್ಸಿಪಾಲ್ ಶಿವಶಂಕರ್, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಟಿ.ಚಂದನ್ ಹಾಗೂ ನಾನಾ ವಿಭಾಗಗಳ ಮುಖ್ಯಸ್ಥರು ಪಾಲ್ಗೊಂಡಿದ್ದರು.

# ಭೂಮಿಯ ಸಂರಕ್ಷಣೆಗೆ ಎಲ್ಲರೂ ಸಂಕಲ್ಪತೊಡಬೇಕು

## ನಂದಿ ಗುಡ್ಡಗಾಡು ಓಟಕ್ಕೆ ಚಾಲನೆ ನೀಡಿದ ಎಸ್ಪಿ ಕುಶಲ್ ಚೌಕ್ಸೆ ಸಲಹೆ | ಆರೋಗ್ಯ ರಕ್ಷಣೆಗೆ ವ್ಯಾಯಾಮ ಮಾಡಿ | ಪ್ಲಾಸ್ಟಿಕ್ ಬಳಸಬೇಡಿ

• **ಕನ್ನಡಪ್ರಭ ವಾರ್ತೆ** ಚಿಕ್ಕಬಳ್ಳಾಪುರ

ನಮ್ಮ ಆರೋಗ್ಯ ರಕ್ಷಣೆಗೆ ವ್ಯಾಯಾಮ ಅಗತ್ಯ. ಓಟಗಳ ಮೂಲಕ ಮನುಷ್ಯ ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ದೇಶದಲ್ಲಿ ತಾಂಡವವಾಡುತ್ತಿರುವ ಆರೋಗ್ಯ ಸಮಸ್ಯೆಗಳು ದೂರವಾಗಲಿ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ ತಿಳಿಸಿದರು.

ನಗರ ಹೊರವಲಯದ ಎಸ್‌ಜೆಸಿ ತಾಂತ್ರಿಕ ಮಹಾವಿದ್ಯಾಲಯದ ಬಿಜಿಎಸ್ ಮೈದಾನದಲ್ಲಿ ಶನಿವಾರ ಮುಂಜಾನೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದಿಂದ ಆಯೋಜಿಸಿದ್ದ ನಾಳೆಯ ಉಳಿವಿಗೆ, ಇಂದು ಓಡಿ ಎಂಬ ಘೋಷ ವಾಕ್ಯದೊಂದಿಗೆ 3 ನೇ ಬಿ.ಜಿ.ಎಸ್ ನಂದಿ ಓಟ-2025 ರ 5 ಕಿ.ಮೀ ಮತ್ತು 10 ಕಿ.ಮೀ ಗುಡ್ಡಗಾಡು ಓಟಕ್ಕೆ ಹಸಿರು ನಿಶಾನೆ ತೋರಿಸಿ ಮಾತನಾಡಿದರು.




ಚಿಕ್ಕಬಳ್ಳಾಪುರ ಹೊರವಲಯದ ಬಿಜಿಎಸ್ ಮೈದಾನದಲ್ಲಿ ನಂದಿ ಓಟ- 2025ಗೆ ಎಸ್ಪಿ ಪಿ. ಕುಶಲ್ ಚೌಕ್ಸೆ ಹಸಿರು ನಿಶಾನೆ ತೋರಿಸಿದರು.

**ಭೂಮಿಯ ರಕ್ಷಣೆ ಎಲ್ಲರ ಹೊಣೆ:** ನಾವು ವಾಸವಾಗಿರುವ ಭೂತಾಯಿಯ ಸಂರಕ್ಷಣೆ ನಮ್ಮದೇ ಹೊಣೆಗಾರಿಕೆಯಾಗಿದೆ ಎಂದು ಹಾಗಾಗಿ ನಾವೆಲ್ಲರೂ ಸಸಿ ನೆಡುವ ಮೂಲಕ ಪರಿಸರ ಸಂರಕ್ಷಿಸಬೇಕಿದೆ. ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಪರಿಸರ ರಕ್ಷಣೆಯ ದಿವ್ಯ ಸಂಕಲ್ಪ ಮಾಡಬೇಕು. ಇದು ಒಬ್ಬರ ಕೆಲಸವಲ್ಲ, ಎಲ್ಲರ ಕೆಸಲವಾಗಿದೆ. ಎಲ್ಲರಿಗೂ ನಂದಿ ಗಿರಿಧಾಮದ ಪ್ರಕೃತಿಯ ಮಡಿಲಿನಲ್ಲಿ ಇಂತಹ ಸ್ವಚ್ಛ ಹಸಿರಿನ ನಡೆ ಉತ್ಸಾಹ ಮತ್ತು ಸ್ಫೂರ್ತಿ ತಂದುಕೊಡುತ್ತದೆ. ಪ್ರತಿನಿತ್ಯ ನಾವು ಓಟ, ವ್ಯಾಯಾಮಗಳನ್ನು ರೂಡಿಸಿಕೊಂಡು ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದು ಬಹು ಮುಖ್ಯ ಎಂದರು.

ಎಸ್‌ಜೆಸಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಜಿ.ಟಿ.ರಾಜು ಮಾತನಾಡಿ, ನಮ್ಮ ಎಸ್.ಜೆ.ಸಿ.ಐ.ಟಿ ಯ ನಾಳೆಯ ಉಳಿವಿಗೆ, ಇಂದು ಓಡಿ ಎಂಬ ಘೋಷ ವಾಕ್ಯದೊಂದಿಗೆ ಈ ಓಟವು ಪ್ಲಾಸ್ಟಿಕ್ ಮುಕ್ತ, ವಾಯುಮಾಲಿನ್ಯ ಮುಕ್ತ, ನವೀಕರಿಸಬಹುದಾದ ಸಂಪನ್ಮೂಲಗಳ ಬಳಕೆಯ ಮೂಲಕ ಇನ್ನೂ ಹಲವಾರು ಪರಿಸರ ಸಂರಕ್ಷಣೆಯ ವಿವಿಧ ಕಾರ್ಯಕ್ರಮಗಳಿಗೆ ಹಾದಿಯಾಗುತ್ತದೆ. ಎಂದರು.

**ದುಶ್ಚಟ ಬಿಡಲು ಓಟ ಸಹಕಾರಿ:** ಎಸ್‌ಜೆಸಿಐಟಿ ಆಡಳಿತಾಧಿಕಾರಿ ಜಿ.ರಂಗಸ್ವಾಮಿ ಮಾತನಾಡಿ, ಇಂದು ಕೆಟ್ಟ ಚಟಗಳಿಗೆ ಬಲಿಯಾಗುವುದನ್ನು ತಪ್ಪಿಸಲು ಇಂತಹ ಓಟಗಳು ಪ್ರಯೋಜನಕಾರಿಯಾಗಿವೆ. ಯುವ ಜನರು ಇಂದು ಭಾರತವನ್ನು ಮುನ್ನಡೆಸಬೇಕಾಗಿದ್ದು ಪ್ರಧಾನಿಯವರ ಆಶಯವನ್ನು ಓಟದ ಮೂಲಕ ಸಫಲಗೊಳಿಸುವುದರೊಂದಿಗೆ ಪ್ರತಿನಿತ್ಯ ವ್ಯಾಯಾಮ ಮಾಡುವ ಅಭ್ಯಾಸವನ್ನು ಬೆಳೆಸಿಕೊಳ್ಳೋಣ ಎಂದರು.

**ನಾಯ್ಕರ್‌ಗೆ ಪ್ರಥಮ ಬಹುಮಾನ:** ನಂದಿ ಓಟ 2025 ರ ಓಟದಲ್ಲಿ ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗದವರುಗಳು ಸೇರಿದಂತೆ ಸುಮಾರು 1000ಕ್ಕೂ ಹೆಚ್ಚು ಸ್ಪರ್ಧಿಗಳು ಉತ್ಸಾಹದಿಂದ ಭಾಗವಹಿಸಿದ್ದರು.

ಸ್ಪರ್ಧೆಯಲ್ಲಿ 10 ಕಿ.ಮೀ ಓಟದಲ್ಲಿ ಮಂಗಳೂರಿನ ರಂಗಣ್ಣ ನಾಯ್ಕರ್ ಮೊದಲ ಬಹುಮಾನ, ಹಾವೇರಿಯ ಗೋವಿಂದರಾಜು ಹಳಗಿ ಎರಡನೇ ಬಹುಮಾನ ಮತ್ತು ಬೆಂಗಳೂರಿನ ಗಣಪತಿ ಮೂರನೇ ಬಹುಮಾನ ಪಡೆದು ವಿಜೇತರಾದರು.

5 ಕಿ.ಮೀ ಓಟದಲ್ಲಿ ದೊಡ್ಡಬಳ್ಳಾಪುರದ ಪ್ರಣತಿ ಪ್ರಥಮ ಬಹುಮಾನ, ಸೀಮಾ ಮಹಂತೇಶ್ ಎರಡನೇ ಬಹುಮಾನ, ಉಡುಪಿಯ ಜಿ.ನಂದಿನಿ ಮೂರನೇ ಬಹುಮಾನ ಪಡೆದು ವಿಜೇತರಾದರು. ಈ ಸಂದರ್ಭದಲ್ಲಿ ಎಲ್ಲಾ ವಿಜೇತರಿಗೆ ಗಣ್ಯರಿಂದ ಸುಮಾರು 50,000 ರು.ಗಳ ಬಹುಮಾನ ನೀಡಲಾಯಿತು.

ಈ ವೇಳೆ ಅಕಾಡೆಮಿಕ್ಸ್ ಡೀನ್ ಡಾ.ಮಂಜುನಾಥ್ ಕುಮಾರ್.ಬಿ.ಹೆಚ್, ಸ್ಟುಡೆಂಟ್ ವೆಲ್‌ಫೇರ್ ಡೀನ್ ಜಿ.ನಾರಾಯಣ್, ಬಿ.ಜಿ.ಎಸ್ ಪಾಲಿಟೆಕ್ನಿಕ್ ಪ್ರಾಂಶುಪಾಲ ಡಾ.ವೈ.ಆರ್ ಮಂಜುನಾಥ್, ಬಿ.ಪಿ.ಎಡ್ ಪ್ರಾಂಶುಪಾಲ ಶಿವಶಂಕರ್, ಎಸ್.ಜೆ.ಸಿ.ಐ.ಟಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಟಿ.ಚಂದನ್ ಹಾಗೂ ವಿವಿಧ ವಿಭಾಗದ ಮುಖ್ಯಸ್ಥರು, ಭೋಧಕ ಮತ್ತು ಭೋಧಕೇತರ ವರ್ಗದ ಸಿಬ್ಬಂದಿ ಹಾಗೂ ಬಿಜಿಎಸ್ ನ ವಿವಿಧ ಶಾಲೆಗಳ ಮುಖ್ಯಸ್ಥರು ಶಿಕ್ಷಕ ವೃಂದದವರು ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

# ಓಟದಿಂದ ಮಾನಸಿಕ, ದೈಹಿಕವಾಗಿ ಸದೃಢ

## ಬಿಜಿಎಸ್ ನಂದಿ ಓಟ–2025ಕ್ಕೆ ಚಾಲನೆ ನೀಡಿ ಮಾತನಾಡಿದ ಎಸ್‌ಪಿ ಕುಶಲ್ ಚೌಕ್ಸೆ

■ **ವಿಕ ಸುದ್ದಿಲೋಕ** ಚಿಕ್ಕಬಳ್ಳಾಪುರ

ಪ್ರತಿಯೊಬ್ಬರೂ ಪ್ರತಿನಿತ್ಯ ವ್ಯಾಯಾಮ, ಓಟ, ದೈಹಿಕವಾಗಿ ದಂಡಿಸುವ ಚಟುವಟಿಕೆಗಳಲ್ಲಿ ಭಾಗಿಯಾಗಬೇಕು. ಇದರಿಂದ ಮಾನಸಿಕ ಮತ್ತು ದೈಹಿಕವಾಗಿ ಸದೃಢವಾಗಿರಲು ಸಾಧ್ಯ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ ತಿಳಿಸಿದರು.

ನಗರ ಹೊರವಲಯದ ಎಸ್‌ಜೆಸಿ ತಾಂತ್ರಿಕ ಮಹಾವಿದ್ಯಾಲಯದ ಬಿಜಿಎಸ್ ಗ್ರೌಂಡ್‌ನಿಂದ ''ನಾಳೆಯ ಉಳಿವಿಗೆ, ಇಂದು ಓಡಿ'' ಘೋಷ ವಾಕ್ಯದೊಂದಿಗೆ ಏರ್ಪಡಿಸಿದ್ದ 10 ಕಿ.ಮೀ. ಮತ್ತು 5 ಕಿ.ಮೀ. ಬಿಜಿಎಸ್ ನಂದಿ ಓಟ–2025ಕ್ಕೆ ಚಾಲನೆ ನೀಡಿ ಸ್ವತಃ ತಾವು ಓಡಿದ ಅವರು, ನಂತರ ಸುದ್ದಿಗಾರರ ಜತೆ ಮಾತನಾಡಿದರು.

ಮನುಷ್ಯರು ಕ್ರಿಯಾಶೀಲವಾಗಿರಬೇಕಾದರೆ ದಿನನಿತ್ಯ ವ್ಯಾಯಾಮ, ಓಟ, ಕ್ರೀಡೆಗಳಲ್ಲಿ ಭಾಗವಹಿಸಬೇಕು. ಆಗ ಒತ್ತಡ ರಹಿತವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಎಸ್‌ಜೆಸಿಐಟಿ ವತಿಯಿಂದ ನಂದಿ ಓಟ ನಡೆಸುತ್ತಿರುವುದು ಸ್ವಾಗತಾರ್ಹ. ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚೆಚ್ಚು ನಡೆಯಬೇಕು. ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಇದರಿಂದ ಉತ್ತಮ ಸಂದೇಶ ರವಾನೆಯಾಗಲಿದೆ ಎಂದು ತಿಳಿಸಿದರು.

ಎಸ್‌ಜೆಸಿಐಟಿ ಪ್ರಿನ್ಸಿಪಾಲ್ ಡಾ.ಜಿ.ಟಿ.ರಾಜು ಮಾತನಾಡಿ, ಸ್ವಾಮೀಜಿಯವರ ಆಶೀರ್ವಾದದಿಂದ ಎಸ್‌ಜೆಸಿಐಟಿಯಲ್ಲಿ ಕಳೆದ 38 ವರ್ಷಗಳಿಂದ ಸಾವಿರಾರು ಎಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ರೂಪಿಸಿದೆ. 64 ಎಕರೆ ಸುಸಜ್ಜಿತವಾದ ಆವರಣವನ್ನು ನಮ್ಮ ಕಾಲೇಜು ಹೊಂದಿದೆ. ಆರೋಗ್ಯದ ಓಟದಲ್ಲಿ ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗ ಸೇರಿದಂತೆ ಸುಮಾರು 1000ಕ್ಕೂ ಹೆಚ್ಚು ಸ್ಪರ್ಧಿಗಳು ಓಟದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದಾರೆ.




ಚಿಕ್ಕಬಳ್ಳಾಪುರ ಹೊರವಲಯದ ಎಸ್‌ಜೆಸಿಐಟಿಯಲ್ಲಿ ಶನಿವಾರ ಬಿಜಿಎಸ್ ನಂದಿ ಓಟ-2025ಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ ಚಾಲನೆ ನೀಡಿ, ಓಟದಲ್ಲಿ ಪಾಲ್ಗೊಂಡರು.

### 10 ಕಿಮೀ ಓಟದಲ್ಲಿ ಮಂಗಳೂರಿನ ರಂಗಣ್ಣ ನಾಯ್ಕರ್ ಮೊದಲ ಬಹುಮಾನ

ಸ್ಪರ್ಧೆಯಲ್ಲಿ 10 ಕಿ.ಮೀ. ಓಟದಲ್ಲಿ ಮಂಗಳೂರಿನ ರಂಗಣ್ಣ ನಾಯ್ಕರ್ ಮೊದಲ ಬಹುಮಾನ, ಹಾವೇರಿಯ ಗೋವಿಂದರಾಜು ಹಳಗಿ 2ನೇ ಬಹುಮಾನ ಮತ್ತು ಬೆಂಗಳೂರಿನ ಗಣಪತಿ 3ನೇ ಬಹುಮಾನ ಪಡೆದರು. 5 ಕಿ.ಮೀ. ಮಹಿಳಾ ಓಟದಲ್ಲಿ ದೊಡ್ಡಬಳ್ಳಾಪುರದ ಪ್ರಣತಿ ಪ್ರಥಮ ಬಹುಮಾನ, ದೊಡ್ಡಬಳ್ಳಾಪುರದ ಸೀಮಾ ಮಹಂತೇಶ್ 2ನೇ ಬಹುಮಾನ, ಉಡುಪಿಯ ಜಿ.ನಂದಿನಿ 3ನೇ ಬಹುಮಾನ ಪಡೆದರು.

ಕಾರ್ಯಕ್ರಮದಲ್ಲಿ ಎಸ್‌ಜೆಸಿಐಟಿ ಆಡಳಿತಾಧಿಕಾರಿ ಜಿ.ಆರ್.ರಂಗಸ್ವಾಮಿ, ಡೀನ್ ಅಕಾಡೆಮಿಕ್ಸ್ ಡಾ.ಬಿ.ಎಚ್.ಮಂಜುನಾಥ್ ಕುಮಾರ್, ಸ್ಟೂಡೆಂಟ್ ವೆಲ್‌ಫೇರ್ ಡೀನ್ ಡಾ.ಜಿ.ನಾರಾಯಣ್, ಬಿಜಿಎಸ್ ಪಾಲಿಟೆಕ್ನಿಕ್ ಪ್ರಿನ್ಸಿಪಾಲ್ ಡಾ.ವೈ.ಆರ್.ಮಂಜುನಾಥ್, ಬಿಜಿಎಸ್ ಬಿ.ಪಿಎಡ್ ಪ್ರಿನ್ಸಿಪಾಲ್ ಶಿವಶಂಕರ್, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಟಿ.ಚಂದನ್ ಹಾಗೂ ನಾನಾ ವಿಭಾಗಗಳ ಮುಖ್ಯಸ್ಥರು ಪಾಲ್ಗೊಂಡಿದ್ದರು.